**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ್ಯಾದಂ ರವರ ನ್ಯಾಯಾಲಯ, ಕೊಳ್ಳೇಗಾಲ.**

**ಸಿಸಿ ನಂ. 188 / 2020**

| | | |
|---|---|---|
| ಸಾಕ್ಷಿಯ ಹೆಸರು | : ಪಿ. ಮಲ್ಲೇಶ್ | |
| ತಂದೆಯ ಹೆಸರು | : ಪುಟ್ಟಮಲ್ಲನಾಯಕ | |
| ವಯಸ್ಸು | : 35 ವರ್ಷ | |
| ಉದ್ಯೋಗ | : ಲಾರಿ ಡ್ರೈವರ್ | ಚಾಸಾ -1 |
| ವಾಸ ಸ್ಥಳ | : ಬಸ್ತೀಪುರ | ಪ್ರಾಸಾ -1 |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾದ ದಿನಾಂಕಃ** 07.08.2021

**ಮುಖ್ಯ ವಿಚಾರಣೆ – ಮಾನ್ಯ ಸ.ಸ.ಅ. ರವರಿಂದ**

ನನಗೆ ಚಾಸಾ 2 ರಿಂದ 5 ರವರ ಪರಿಚಯವಿರುತ್ತದೆ. ಆರೋಪಿತನನ್ನು ಈ ಹಿಂದೆ ಠಾಣೆಯಲ್ಲಿ ದಸ್ತಗಿರಿ ಮಾಡಿಕೊಂಡು ಬಂದಾಗ ನೋಡಿರುತ್ತೇನೆ. ಕಳೆದ ಒಂದು ವರ್ಷದ ಹಿಂದೆ ನಾನು ತಮಿಳುನಾಡಿನಲ್ಲಿದ್ದಾಗ ನನ್ನ ತಮ್ಮ ಫೋನ್ ಮಾಡಿ ಕಳ್ಳತನವಾಗಿದೆ ಬಂದು ನೋಡಿ ಎಂದು ತಿಳಿಸಿದ್ದರಿಂದ ನಾನು ಕೊಳ್ಳೇಗಾಲಕ್ಕೆ ಬಂದು ಬೆಳಿಗ್ಗೆ 8.30 ರಿಂದ 9.30 ರ ಸಮಯದಲ್ಲಿ ಬಸ್ತೀಪುರದ ನಮ್ಮ ಮನೆಯನ್ನು ನೋಡಿದಾಗ ಕಳ್ಳತನವಾಗಿರುವುದು ಕಂಡು ಬಂದಿದ್ದು ಆ ಬಗ್ಗೆ ಕೊಳ್ಳೇಗಾಲ ಪಟ್ಟಣ ಪೋಲಿಸ್ ಠಾಣೆಗೆ ದೂರನ್ನು ನೀಡಿರುತ್ತೇನೆ. ನಾನು ಪೋಲಿಸರಿಗೆ ಮರು ಹೇಳಿಕೆಯನ್ನು ಕೊಟ್ಟಿರುತ್ತೇನೆ. ಆ ದಿನ ನಾನು ಕೊಟ್ಟಂತಹ ದೂರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಗೆ ದೂರನ್ನು ತೋರಿಸಲಾಗಿ ಅದರಲ್ಲಿರುವ ಸಹಿಯನ್ನು ತನ್ನದೇ ಎಂದು ಒಪ್ಪಿಕೊಂಡಿದ್ದು ದೂರನ್ನು ನಿಪಿ-1 ಎಂದು ಸಾಕ್ಷಿ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಕಳ್ಳತನವಾದಂತಹ ವಸ್ತುಗಳನ್ನು ನೋಡಿದರೆ ಗುರುತುಸ ಹಿಡಿಯುತ್ತೇನೆ. ಸಾಕ್ಷಿಗೆ ಈ ದಿನ ಎರಡು ಒಡವೆ ಇಡುವಂತಹ ಸಣ್ಣ ಬಾಕ್ಸ್ ಗಳನ್ನು ಹಾಗೂ ಒಂದು ಕಬ್ಬಿಣದ ಮಚ್ಚು, ಒಂದು ಕಾರ್ಬನ್ ಕಪ್ಪು ಬಣ್ಣದ ಮೊಬೈಲ್ ಹಾಗೂ 2320/- ಹಣವನ್ನು ತೋರಿಸಲಾಗಿ ಸಾಕ್ಷಿಯು ಅವುಗಳನ್ನು ನೋಡಿ ಗುರುತಿಸಿರುತ್ತಾರೆ. ಆದ್ದರಿಂದ ಒಡವೆ ಬಾಕ್ಸ್ ಗಳನ್ನು ಮುದ್ದೆ ಮಾಲು 1 ಮತ್ತು 2 ಎಂದು, ಕಬ್ಬಿಣದ ಮಚ್ಚನ್ನು ಮುದ್ದೆ ಮಾಲು 3 ಎಂದು, ಒಂದು ಕಾರ್ಬನ್ ಕಪ್ಪು ಬಣ್ಣದ ಮೊಬೈಲನ್ನು ಮುದ್ದೆ ಮಾಲು 4 ಎಂದು, ರೂ. 2320/- ಹಣವನ್ನು ಮುದ್ದೆ ಮಾಲು 5 ಎಂದು ಗುರುತಿಸಲಾಯಿತು. ಸಾಕ್ಷಿಗೆ ಸ್ಥಳ ಮಹಜರನ್ನು ತೋರಿಸಲಾಗಿ ಸಾಕ್ಷಿಯು ಅದರಲ್ಲಿರುವಂತಹ ತನ್ನ ಸಹಿಯನ್ನು ತನ್ನದೇ ಎಂದು ಒಪ್ಪಿಕೊಂಡಿದ್ದು ದೂರನ್ನು ನಿಪಿ-2 ಎಂದು ಸಾಕ್ಷಿ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಮಾನ್ಯ ಸ.ಸ.ಅ.ರವರ ಕೋರಿಕೆಯ ಮೇರೆಗೆ ಪಾಟೀ ಸವಾಲಿಗೆ ಅನುಮತಿಸಲಾಯಿತು.)

**ಪಾಟೀ ಸವಾಲು – ಮಾನ್ಯ ಸ.ಸ.ಅ. ರವರಿಂದ**

ಗಿರಿಜಮ್ಮ ಮತ್ತು ನಾವು ಒಟ್ಟಿಗೆ ಬಾಡಿಗೆ ಮನೆಯಲ್ಲಿದ್ದೆವು ಎಂದರೆ ಸರಿ. ದಿನಾಂಕಃ 09.06.2020 ರಂದು ಮಧ್ಯಾಹ್ನ 2.00 ಗಂಟೆಗೆ ನನ್ನ ತಂಗಿ ಗಿರಿಜಮ್ಮನವರು ರಾತ್ರಿಯಾದರೂ ನನ್ನ ತಾಯಿ ಮನೆಗೆ ಬರದೇ ಇರುವ ಕಾರಣ ಮನೆ ಬೀಗ ಹಾಕಿಕೊಂಡು ಅದರ ಬೀಗವನ್ನು ಮನೆಯ ತೊಲೆಯ ಮೇಲೆ ಇಟ್ಟು, ಬಸ್ತೀಪುರ ಗ್ರಾಮದಲ್ಲಿರುವ ಅಕ್ಕನ ಮಗಳು ಭಾಗ್ಯಮ್ಮರವರ ಮನೆಯಲ್ಲಿ ಹೋಗಿ ಮಲಗಿದ್ದು, ಮತ್ತೆ ಮರು ದಿನ ಬೆಳಿಗ್ಗೆ 6.00 ಗಂಟೆಗೆ ಮನೆಗೆ ಹೋಗಿ ನೋಡಲಾಗಿ ಮನೆಯ ಬಾಗಿಲು ತೆರೆದಿದ್ದು, ನಂತರ ಮನೆಯೊಳಗಡೆ ಹೋಗಿ ನೋಡಲಾಗಿ ಬೀರು ಸಹ ತೆರೆದಿದ್ದು, ನಾನು ನನ್ನ ತಾಯಿ ಮನೆಗೆ ಬಂದಿರಬಹುದೆಂದು ತಿಳಿದುಕೊಂಡು ಸದರಿ ಮನೆಗೆ ಹೋಗಿ ನೋಡಲಾಗಿ ನನ್ನ ತಾಯಿ ಜೊತೆ ಮಾತನಾಡಿದಾಗ ನನ್ನ ತಾಯಿ ಮನೆಗೆ ಬಂದಿರುವುದಿಲ್ಲ ಎಂದು ತಿಳಿದು ನಂತರ ಬೀರುವನ್ನು ಪರಿಶೀಲಿಸಿದಾಗ ಅಲ್ಲಿಯೇ ಇದ್ದ ಬೀರುವಿನ ಬೀಗವನ್ನು ತೆಗೆದುಕೊಂಡು ಯಾರೋ ಕಳ್ಳರು ಬೀರನ್ನು ತೆಗೆದು ಅದರೊಳಗಿದ್ದಂತಹ ಸುಮಾರು 9 ಸಾವಿರ ಬೆಲೆ ಬಾಳುವ ಓಲೆ ಜುಮುಕಿ ಮತ್ತು ಸುಮಾರು 6 ಸಾವಿರ ಬೆಲೆ ಬಾಳುವ ಉಂಗುರವನ್ನು ಯಾರೋ ಕಳ್ಳರು ಕಳ್ಳತನ ಮಾಡಿಕೊಂಡು ಹೋಗಿರುವ ಬಗ್ಗೆ ಗೊತ್ತಾಗಿದ್ದು ಪಕ್ಕದ ಮನೆಯ ಮಣಿಕಂಠರವರು ಸಹ ತಮ್ಮ ಮನೆಗೆ ಬೀಗ ಹಾಕಿಕೊಂಡು ಮದುವೆಗೆ ಹೋಗಿದ್ದು ಅವರ ಮನೆಯ ಬೀಗವನ್ನು ಸಹಾ ಒಡೆದು ಹಾಕಿ ಸುಮಾರು 9 ಸಾವಿರ ರೂ. ಗಳನ್ನು ಕಳ್ಳತನ ಮಾಡಿಕೊಂಡು ಹೋಗಿರುತ್ತಾರೆ. ನಾನು ನನ್ನ ತಾಯಿ ಒಡೆಯರ ಪಾಳ್ಯದಿಂದ ಬಂದ ಮೇಲೆ ಪರಿಶೀಲಿಸಿ ಈ ದಿನ ತಡವಾಗಿ ಠಾಣೆಗೆ ಹಾಜರಾಗಿ ಕ್ರಮ ಕೈಗೊಳ್ಳಬೇಕೆಂದು ದೂರು ನೀಡಿರುತ್ತೇನೆಂದರೆ ಸರಿಯಲ್ಲ. ಈ ಮೇಲೆ ತಿಳಿಸಿದ ವಿಷಯ ನನಗೆ ಗೊತ್ತಿದ್ದರೂ ಸಹಾ ಆರೋಪಿಗೆ ಸಹಾಯ ಮಾಡಲು ಇಲ್ಲ ಎಂದು ಸುಳ್ಳು ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲು – ಶ್ರೀ ಡಿ.ಕೆ . ವಕೀಲರಿಂದ**

ಆರೋಪಿಯನ್ನು ಪೋಲಿಸ್ ಠಾಣೆಯಲ್ಲಿ ಯಾವ ದಿನಾಂಕ ಮತ್ತು ಯಾವ ದಿನದಂದು ನೋಡಿರುತ್ತೇನೆಂದು ಹೇಳಲು ನೆನಪಿರುವುದಿಲ್ಲ. ಸ್ಥಳ ಮಹಜರನ್ನು ಯಾವ ದಿನಾಂಕದಂದು ಮಾಡಲಾಗಿದೆ ಮತ್ತು ಅದಕ್ಕೆ ಯಾವಾಗ ಸಹಿ ಮಾಡಿರುತ್ತೇನೆಂದು ನನಗೆ ಹೇಳಲು ಬರುವುದಿಲ್ಲ. ನಿಪಿ–2 ಕ್ಕೆ ಪೋಲಿಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ಮುದ್ದೆ ಮಾಲು 1 ರಿಂದ 5 ನಮಗೆ ಸೇರಿರುತ್ತವೆ ಎಂದು ನಿರ್ದಿಷ್ಟವಾಗಿ ಹೇಳಲು ಯಾವುದೇ ಗುರುತು ಇಟ್ಟುಕೊಂಡಿಲ್ಲ ಎಂದರೆ ಸರಿ. ನಿಪಿ–2 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿರುವುದಿಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಲಾಯಿತು.

ಓ ಹೇ ಕೇ ಸಾ ಸ ಇ ಒ

(ಆನಂದ ಎಂ. )
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ ದಂ. ಕೊಳ್ಳೇಗಾಲ.